# ನಾಲ್ಕು ಕವಿತೆಗಳು

■ ಸುಶೀಲಾ ಸೋಮಶೇಖರ್



ಚಿತ್ರಗಳು: ವಿಜಯಕುಮಾರಿ

## ಸಹಪಾಠಿ

ನನ್ನ ಗೆಳೆಯ ಏಕೋ ಇಂದು
ತುಂಬ ತುಂಬ ಅತ್ತನು
ಏಕೆ ಎನುತ ನಾನು ಕೇಳೆ
ಭುಜದಿ ತಲೆಯನ್ನಿಟ್ಟನು

ಓದು ಬರಹದಲ್ಲಿ ಹಿಂದೆ ಎಂದು
ಅಪ್ಪ ಅಮ್ಮ ಜರಿವರು
ಬಂಧು ಬಳಗ ಗೇಲಿ ಮಾಡಿ
ಮನಸಿಗೆ ನೋವ ತರುವರು

ಏನೆ ಹೇಳು ಗೆಳೆಯ ನನಗೆ
ಓದು ತಲೆಗೆ ಹತ್ತದು
ವಿದ್ಯೆ ಇರದ ಬದುಕ ನೆನೆದು
ದುಃಖ ಉಕ್ಕಿ ಬರುತಿಹುದು

ಪ್ರೀತಿಯ ಗೆಳೆಯ ಏತಕೆ ಅಳುವೆ
ನಾವು ಕೂಡಿ ಕಲಿಯೋಣ
ಧೈರ್ಯವ ತಳೆದು ಇಡು ಸಹನೆ
ಕಲಿಕೆಯಲಿ ಮುಂದೆ ಸಾಗೋಣ

ಪ್ರೀತಿಯ ಮಾತಿಗೆ ಹಿಗ್ಗಿದ ಗೆಳೆಯ
ಕಲಿಕೆಗೆ ಮನವನು ತಾ ನೆಟ್ಟ
ಇದ್ದರೆ ಗೆಳೆಯರ ಸಹಕಾರ
ಭವ್ಯದ ಬಾಳು ಸಾಕಾರ

## ಅರಳುವ ಹೂಗಳು

ಗಾಳಿ ಮೆದ್ದು ಬೆಳಕನುಂಡ
ಗಿಡ ಮರಗಳಲಿ ಹೂ ಅರಳಲಿ
ದಳ ದಳನೆ ದಳವ ಬಿಚ್ಚಿ
ಗಂಧ ಗಾಳಿ ಹರಡಲಿ

ಸಾಗರದ ದಡದಿ ನಿಂತು
ಅಲೆಗಳಲಿ ಆಡಲಿ
ಕಪ್ಪೆಚಿಪ್ಪ ಗುಡ್ಡೆ ಮಾಡಿ ನಲಿಯಲಿ
ಮರಳ ಗೂಡ ಕಟ್ಟಲಿ

ಮೈ ಚಾಚಿದ ಇರುಳ ಬಾನ
ಚುಕ್ಕಿಗಳ ಎಣಿಸಲಿ
ರವಿತೇಜನ ಒಡಲಲ್ಲಿ
ಬಿಳಿ ಮುಗಿಲಾಗಿ ತೇಲಲಿ

ಮಣ್ಣ ಪ್ರೀತಿಯಲ್ಲಿ ಆಡಿ
ಮಣ್ಣ ವಾಸನೆಯ ಅರಿಯಲಿ
ಬೆಟ್ಟ ಗುಡ್ಡ ಗಿರಿ ಕಣಿವೆಗಳ
ತಂಪು ಹಸಿರ ತಣಿದು ನಲಿಯಲಿ

ಮುದ್ದು ಮುದ್ದು ಕೆನ್ನೆಗಳ
ರಕ್ತ ಕೆಂಪಾಗದಿರಲಿ
ಕೆಟ್ಟ ಸ್ಪರ್ಶ ಸದ್ದಿನಲ್ಲಿ
ಅರಳುವ ಹೂಗಳು ಬಾಡದಿರಲಿ

ಜಗದೀ ಗುಡಿಯಲಿ ಕಂಡಾ ದೇವರು
ಭವಿಷ್ಯದ ಬೆಳಕಿನ ಹೂಗಳು
ನಿರ್ಮಲ ನಿಸ್ವಾರ್ಥದ
ಮುಗ್ಧತೆಯ ಹೂಮನಸುಗಳು

## ಹೂ ಮನದ ಹುಡುಗಿ

ಹೂವನು ಮಾರುತ ಬಂದಳು ಹುಡುಗಿ
ಹೂವಿನ ಗುಣವನು ಹೊತ್ತವಳು
ಅವರಿವರೆನ್ನದೆ ಮನೆಮನೆ ತಿರುಗಿ
ಮನಕೆ ಹತ್ತಿರವಾದವಳು

ಅಳತೆಯು ಪಕ್ಕ ಲೆಕ್ಕವು ಚೊಕ್ಕ
ಬನ್ನಿರಿ ಕೊಳ್ಳಿರಿ ಎನುತಿಹಳು
ಮಳೆಗೆ ಬಿಸಿಲಿಗೆ ಜಗ್ಗದ ನಡಿಗೆ
ಬೀರುತ ನಡೆವಳು ಹೂ ನಗೆ

ಹಬ್ಬ ಹರಿದಿನ ಮದುವೆ ಮುಂಜಿ
ಕೊಳ್ಳಿರಿ ಹೂವನು ಎನುತಿಹಳು
ಹೂವಿನ ಮುಗ್ಧ ಕಣ್ಣವಳು
ಬುಟ್ಟಿಯನಿಳಿಸಿ ಹೂ ಕೊಡುವವಳು

ಕಾಲವು ಕರಗಲು ಕಾಯಕ ಮುಗಿಯಲು
ಶಾಲೆಗೆ ಹೆಜ್ಜೆಯ ಹಾಕುವಳು
ಓದಿ ಬರೆಯುತ ವಿದ್ಯೆ ಕಲಿಯುತ
ಹೂ ಬದುಕಿಗೆ ಹೆಜ್ಜೆಯನಿಟ್ಟವಳು

